ಕರ್ನಾಟಕ ವಿಧಾನ ಪರಿಷತ್ತು

ಚುಕ್ಕಿ ಗುರುತಿಲ್ಲದ ಪ್ರಶ್ನೆ ಸಂಖ್ಯೆ	140
ಮಾನ್ಯ ಸದಸ್ಯರ ಹೆಸರು	ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	16-07-2019
ಉತ್ತರಿಸಬೇಕಾದ ಸಚಿವರು	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಕ್ರಸಂ	ಪ್ರಶ್ನೆಗಳು	ಉತ್ತರ
ಅ)	ರಾಜ್ಯದಲ್ಲಿ ಈ ವರ್ಷ ಹೆಚ್1-ಎನ್1 (ಹಂದಿ ಜ್ವರ)ರೋಗ ದಿನೇ ದಿನೇ ಹರಡುತ್ತಿದ್ದು, ಕಳೆದ ವರ್ಷಕ್ಕಿಂತ ಈ ಬಾರಿ ಅಧಿಕ ಸಾವುಗಳು ಸಂಭವಿಸಿರುವುದು ನಿಜವೇ:	ನಿಜ ರಾಜ್ಯದಲ್ಲಿ ಹೆಚ್1-ಎನ್1 (ಹಂದಿ ಜ್ವರ) ಕಳೆದ ವರ್ಷ 1733 ಖಚಿತ ಪ್ರಕರಣಗಳು ವರದಿಯಾಗಿದ್ದು, ಈ ವರ್ಷ ದಿನಾಂಕ:11-7-2019 ವರಗೆ 1774 ಖಚಿತ ಪ್ರಕರಣಗಳು ವರದಿಯಾಗಿರುತ್ತವೆ. ಕಳೆದ ವರ್ಷ ಈ ಸೋಂಕಿನಿಂದ 87 ಜನರು ಹಾಗೂ ಈ ವರ್ಷ ದಿನಾಂಕ:11-7-2019 ವರೆಗೆ 87 ಜನರು ಸಾವನ್ನಪ್ಪಿದ್ದಾರೆ.
ಆ)	ಹಂದಿಜ್ವರ ಹರಡದಂತೆ ತಡೆಗಟ್ಟಲು ಸರ್ಕಾರ ಇದುವರೆಗೆ ಕೈಗೊಂಡಿರುವ ಕ್ರಮಗಳೇನು:	ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.
ಇ)	ಕಳೆದ 03 ವರ್ಷಗಳಲ್ಲಿ ಈ ರೋಗದಿಂದ ಮೃತಪಟ್ಟವರ ಜಿಲ್ಲಾವಾರು ವಿವರಗಳನ್ನು ಒದಗಿಸುವುದು?	ಕಳೆದ 03 ವರ್ಷಗಳಲ್ಲಿ ಹೆಚ್1ಎನ್1 ಸೋಂಕಿನಿಂದ ಮೃತಪಟ್ಟವರ ಜಿಲ್ಲಾವಾರು ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.

ಆಕುಕ 02 ಎಸ್ಎಂಎಂ 2019

(ಶಿವಾನಂದ ಎಸ್ ಪಾಟೀಲ)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

- ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ "ಅಂತರ ಇಲಾಖಾ ಕೋ ಆರ್ಡಿನೇಷನ್ ಕಮಿಟಿ" ಸಭೆಯಲ್ಲಿ ಹೆಚ್1ಎನ್1 ತೀವ್ರತೆ ಬಗ್ಗೆ ಚರ್ಚಿಸಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.
- ಎಲ್ಲಾ ದೈನಂದಿನ ಪತ್ರಿಕೆಗಳಲ್ಲಿ ಸಾರ್ವಜನಿಕರಿಗೆ ಅಗತ್ಯ ಮಾಹಿತಿ ಮತ್ತು ತಿಳುವಳಿಕೆ ನೀಡಲಾಗಿದೆ.
- "ಗ್ರಾಮ ಆರೋಗ್ಯ ನೈರ್ಮಲ್ಯ ಸಮಿತಿ" ಮೂಲಕ ಹೆಚ್1ಎನ್1 ಸೋಂಕಿನ ಬಗ್ಗೆ ಮಾಹಿತಿ ನೀಡಲಾಗುತ್ತಿದೆ.
- ದೂರದರ್ಶನ ಮತ್ತು ರೇಡಿಯೋ ಮಾಧ್ಯಮಗಳ ಮೂಲಕ, ರಾಜ್ಯದ 570 ಸಿನಿಮಾ ಮಂದಿರಗಳಲ್ಲಿ ಸ್ಲೈಡ್ಸ್‌ಗಳ ಮೂಲಕ, 3 ಹೆಸರಾಂತ ಎಫ್.ಎಮ್ ರೇಡಿಯೋ ಮೂಲಕ, 170 ಬಸ್ ನಿಲ್ದಾಣಗಳಲ್ಲಿ ಜಿಂಗಲ್ಸ್ ಗಳ ಮೂಲಕ ಹಾಗೂ KSRTC, BMTC ಮೆಟ್ರೋ ಸ್ಟೇಷನ್ ಹಾಗೂ ರೈಲ್ವೆ ನಿಲ್ದಾಣಗಳಲ್ಲಿ ವೀಡಿಯೋ ಕ್ಲಿಪಿಂಗ್ಸ್‌ಗಳ ಮೂಲಕ ಹೆಚ್1ಎನ್1 ಬಗ್ಗೆ ಮಾಹಿತಿ ಹಾಗೂ ಜಾಗೃತಿ ನೀಡಲಾಗುತ್ತಿದೆ.

ಸಾರ್ವಜನಿಕರ ತಿಳುವಳಿಕೆಗಾಗಿ ಏನು ಮಾಡಬೇಕು ಮತ್ತು ಏನು ಮಾಡಬಾರದು ಎಂಬ ಮಾಹಿತಿಯನ್ನು IEC ಮೂಲಕ ತಿಳಿಸಲಾಗಿದೆ

ಏನು ಮಾಡಬೇಕು:-

- ಸೋಂಕು ಪೀಡಿತರ ಸಂಪರ್ಕದಿಂದ ದೂರವಿರುವುದು, ಶಂಕಿತ ರೋಗಿಯು ಮನೆಯಲ್ಲಿಯೇ ಪ್ರತ್ಯೇಕವಾಗಿರುವುದು.
- ವೈಯ್ಯಕ್ತಿಕ ಸ್ವಚ್ಚತೆ ಕಾಪಾಡಿಕೊಳ್ಳುವುದು. ವಿಶೇಷವಾಗಿ ಆಗಾಗ್ಗೆ ಸಾಬೂನಿನಿಂದ ಕೈ ತೊಳೆದುಕೊಳ್ಳುವುದು.
- ಕೆಮ್ಮುವಾಗ ಮತ್ತು ಸೀನುವಾಗ ಮಾಸ್ಕ್/ಕೈವಸ್ತ್ರ ಉಪಯೋಗಿಸುವುದು. ಉಸಿರಾಟದ ತೊಂದರೆಯಾದಲ್ಲಿ ತಕ್ಷಣ ವೈದ್ಯರ ಸಲಹೆ ಪಡೆಯುವುದು
- ಪೌಷ್ಟಿಕ ಆಹಾರಗಳನ್ನು ಉಪಯೋಗಿಸುವುದು, ಚೆನ್ನಾಗಿ ನಿದ್ದೆ ಮಾಡುವುದು, ಒತ್ತಡಗಳನ್ನು ನಿಭಾಯಿಸುವುದು

ಏನು ಮಾಡಬಾರದು:-

- ಸೋಂಕಿತರ ಕೈ ಕುಲುಕುವುದು, ಚುಂಬಿಸುವುದು ಮತ್ತು ಆಲಂಗಿಸಿಕೊಳ್ಳುವುದನ್ನು ಮಾಡಬಾರದು.
- ತಜ್ಞ ವೈದ್ಯರ ಸಲಹೆ ಇಲ್ಲದೆ ಔಷದೋಪಚಾರ ಮಾಡಬಾರದು.
- ಸಾರ್ವಜನಿಕ ಸ್ಥಳಗಳಲ್ಲಿ ಉಗುಳಬಾರದು. ಆಸ್ಪಿರಿನ್ ಮಾತ್ರೆಗಳನ್ನು ಮಕ್ಕಳಿಗೆ ನೀಡಬಾರದು.

ದಿನಾಂಕ:10-6-2019 ರಿಂದ ಪ್ರಕರಣಗಳ ಸಂಖ್ಯೆಯಲ್ಲಿ ಗಣನೀಯವಾಗಿ ಇಳಿಕೆಯಾಗಿರುತ್ತದೆ. ಅಲ್ಲದೆ ದಿನಾಂಕ:24-5-2019 ರಿಂದ ಯಾವುದೇ ಮರಣಗಳು ಸಂಭವಿಸಿರುವುದಿಲ್ಲ.

ಅನುಬಂಧ-2				
ಕ್ರಮ ಸಂ	ಜಿಲ್ಲೆಗಳು	2017	2018	2019
1	ಬಿ.ಬಿ.ಎಂ.ಪಿ.	2	3	0
2	ಬೆಂಗಳೂರು ನಗರ ಜಿಲ್ಲೆ	0	6	3
3	ಬೆಂಗಳೂರು (ಗ್ರಾ) ಜಿಲ್ಲೆ	0	2	3
4	ಚಿತ್ರದುರ್ಗ	1	6	6
5	ದಾವಣಗೆರೆ	0	6	12
6	ಕೋಲಾರ	1	1	0
7	ಶಿವಮೊಗ್ಗ	2	3	13
8	ತುಮಕೂರು	1	8	3
9	ರಾಮನಗರ	0	1	1
10	ಚಿಕ್ಕಬಳ್ಳಾಪುರ	0	1	3
11	ಬೆಳಗಾಂ	1	2	4
12	ಬಿಜಾಪುರ	0	0	3
13	ಬಾಗಲಕೋಟೆ	0	0	0
14	ಧಾರವಾಡ	0	11	1
15	ಗದಗ	0	2	1
16	ಹಾವೇರಿ	2	3	1
17	ಉತ್ತರ ಕನ್ನಡ ಜಿಲ್ಲೆ	1	1	5
18	ಬಳ್ಳಾರಿ	1	0	2
19	ಬೀದರ್	0	0	2
20	ಗುಲ್ಬರ್ಗ	0	0	0
21	ಯಾದಗೀರ್	0	1	0
22	ಕೊಪ್ಪಳ	0	4	1
23	ರಾಯಚೂರ್	0	1	0
24	ಚಿಕ್ಕಮಗಳೂರು	2	0	1
25	ದಕ್ಷಿಣ ಕನ್ನಡ	0	5	3
26	ಉಡುಪಿ	0	0	9
27	ಹಾಸನ	0	7	3
28	ಕೊಡಗು	0	0	0
29	ಮಂಡ್ಯ	0	2	2
30	ಮೈಸೂರು	1	10	4
31	ಚಾಮರಾಜನಗರ	0	1	1
	ಒಟ್ಟು	**15**	**87**	**87**

ಸಹ ನಿರ್ದೇಶಕರು(ಸಿಎಂಡಿ)
ಆರೋಗ್ಯ ಮತ್ತು ಕು ಕ ಸೇವೆಗಳು